**ದಿನಾಂಕಃ 11.02.2025 ರಂದು ಅಸಾಃ1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

## ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಪಿ ಎ ವಕೀಲರಿಂದಃ

ನಮ್ಮ ಊರಿನಲ್ಲಿ 40-45 ಮನೆಗಳಿರುತ್ತವೆ. ನಮ್ಮ ಊರಿನಿದಂ ಆಲೂರಿಗೆ 15 ಕಿ.ಮೀ ಇದೆ. ನಮ್ಮ ಊರಿನಿಂದ ಹೊನ್ನೇನಹಳ್ಳಿ ಗೇಟಿಗೆ 2 ಕಿ.ಮೀ ಇರುತ್ತದೆ. ನಮ್ಮ ಊರಿನಿಂದ ಬಸ್ ಇರುವುದಿಲ್ಲ, ಹೊನ್ನೇನಹಳ್ಳಿ ಕ್ರಾಸಿನಿಂದ ಬಸ್ ಇರುತ್ತದೆ. ನಮ್ಮ ಊರಿನಿಂದ ಹಾಸನಕ್ಕೆ ಹಾಗೂ ಆಲೂರಿಗೆ ಪ್ರತಿದಿನ ಜನರು ಬರುತ್ತಾರೆ ಎಂದರೆ ಸರಿ. ಆಗೆಯೇ ಸಂಜೆ ಕೂಡ ವಾಪಸ್ಸು ಬಂದಿರುತ್ತಾರೆ.

ನಮ್ಮ ಊರಿನಿಂದ ನನ್ನ ಜೊತೆ ಕಾಲೇಜಿಗೆ ಯಾರು ಬರುತ್ತಿರಲಿಲ್ಲ. ಹೊನ್ನೇನಹಳ್ಳಿ ಕ್ರಾಸಿನಿಂದ ಅಕ್ಕಪಕ್ಕದ ಊರಿನವರು ನನ್ನ ಜೊತೆ ಕಾಲೇಜಿಗೆ ಬರುತ್ತಿದ್ದರು. ಭಕ್ತರವಹಳ್ಳಿ ರಸ್ತೆ ಮತ್ತು ನಮ್ಮ ಊರಿನಿಂದ ರಸ್ತೆ ಹೊನ್ನೇನಹಳ್ಳಿ ಮುಖ್ಯ ರಸ್ತೆಗೆ ಸೇರುತ್ತವೆ. ನಮ್ಮ ಊರಿಗೆ ಹೋಗುವ ರಸ್ತೆಯಲ್ಲಿ ಹೊಲ ಗದ್ದೆಗಳು ಇವೆ ಎಂದರೆ ಸರಿ. ಅದರಲ್ಲಿ ಜೋಳ ರಾಗಿ ಬೆಳೆಸುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಕಾಡು ಕೂಡ ಇತ್ತು ಎಂದು ನುಡಿಯುತ್ತಾರೆ. ಹಳ್ಳಿ ರಸ್ತೆ ಆಗಿರುವುದರಿಂದ ಜನರು ಅವರಿಗೆ ಅನುಕೂಲವಾಗೆ ಓಡಾಡುತ್ತಾರೆ.

ನಮ್ಮ ಊರಿನ ಪಕ್ಕದಲ್ಲಿ ಭಕ್ತರವಳ್ಳಿ ಇರುತ್ತದೆ. ನಾವು ಓಡಾಡುವುದು ಭಕ್ತರವಳ್ಳಿಯ ಮುಖಾಂತರ. ಆ ಸಮಯದಲ್ಲಿ ನನ್ನ ಹತ್ತಿರ ಮೊಬೈಲ್ ಇತ್ತು ಎಂದರೆ ಸರಿಯಲ್ಲ. ಘಟನೆ ನಡೆದ ಜಾಗ ನಮ್ಮ ಊರಿನಿಂದ ಅರ್ಧ ಕಿ.ಮೀ ಅಂತರವಿರುತ್ತದೆ. ಪೂಜಾರವರು ಬಸ್ಸಿಗೆ ಹೋಗಲು ಹೊನ್ನೇನಹಳ್ಳಿಗೆ ಬರುತ್ತಿದ್ದಳು ಹಾಗೆ ಅವರು ನನಗೆ ಸ್ನೇಹಿತೆ. ಕಾಲೇಜಿನಲ್ಲಿ ಹಾಜರಾತಿ ಇರುತ್ತದೆ.

ಕಾಲೇಜಿನಲ್ಲಿ ಟೈಮ್ ಟೇಬಲ್ ಪ್ರತಿಯೊಂದು ದಿನ ಬೇರೆ ಬೇರೆ ಇರುತ್ತದೆ. ಘಟನೆ ನಡೆದ ದಿನ ಕಾಲೇಜು 3.30 ಕ್ಕೆ ಬಿಟ್ಟಿರಬಹುದು ಸರಿಯಾಗಿ ನೆನೆಪಿಲ್ಲ. ನನ್ನ ಸಹೋದರಿ ಅರ್ಪಿತ ರವರು ಅಂತಿಮ ವರ್ಷದ ಎಂ.ಎ ಪಧವೀಯನ್ನು ಹೇಮಗಂಗೋತ್ರಿಯಲ್ಲಿ ಮಾಡುತ್ತಿದ್ದಳು. ನನ್ನ ಸಹೋದರ ಲಾರಿ ಚಾಲಕ ಅವನ್ನು ನಮ್ಮ ಜೊತೆ ವಾಸ ಮಾಡುತ್ತಾನೆ. ನಮ್ಮ ತಂದೆ ವ್ಯವಸಾಯ ಮಾಡುತ್ತಾರೆ ನಮ್ಮ ಜಮೀನಿನಲ್ಲಿ. ನನ್ನ ಸಹೋದರಿಯ ಹತ್ತಿರ ಕೂಡ ಮೊಬೈಲ್ ಇರಲಿಲ್ಲ. ನನ್ನ ಸಹೋದರನ ಹತ್ತಿರ ಮೊಬೈಲ್ ಇತ್ತು, ಆದರೆ ಅವನು ಮನೆಯಲ್ಲಿರುತ್ತಿರಲಿಲ್ಲ ಕೆಲಸಕ್ಕೆ ಹೋಗುತ್ತಿದ್ದ.

ಘಟನೆ ನಡೆದ ಸ್ಥಳದಿಂದ ಪೂಜಾ ರವರ ಮನೆ ಸುಮಾರು ಅರ್ಧ ಅಥವಾ ಮುಕ್ಕಾಲು ಕಿ.ಮೀ ಇರಬಹುದು. ಘಟನೆ ನಡೆದ ಸ್ಥಳದಿಂದ ಕೂಗಾಡಿದರೆ ಚಾಸಾ-4 ರವರ ಮನೆಗೆ ಕೇಳುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ಸಂಜೆ ಆಗಿದ್ದರಿಂದ ಆ ದಿನ ದೂರು ಕೊಡಲು ಆಗಿರುವುದಿಲ್ಲ. ಘಟನೆ ಬಗ್ಗೆ ಚಾಸಾ-4 ರವರ ತಾತ ರಾಮೇಗೌಡ ದನ ಓಡಿಸಿಕೊಂಡು ಹೋಗುತ್ತಿದ್ದರು ಅವರಿಗೆ ವಿಚಾರವನ್ನು ತಿಳಿಸಿರುತ್ತೇನೆ. ಚಾಸಾ-3 ರವರು ನನ್ನ ತಂದೆಗೆ ತಕ್ಷಣೆ ತಿಳಿಸಲು ಅವರ ಹತ್ತಿರ ಮೊಬೈಲ್ ಇರಲಿಲ್ಲ. ಅವರಿಗೆ ವಯಸ್ಸಾಗಿದ್ದರಿಂದ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಚಾಸಾ-4 ರವರ ತಂದೆ ಬಂದ ನಂತರ ಅವರು ನನ್ನ ತಂದೆಗೆ ವಿಚಾರ ತಿಳಿಸಿರುತ್ತಾರೆ.

ನಮ್ಮ ಊರಿನಲ್ಲಿ ದೇವರಾಜೇಗೌಡ ಎನ್ನುವವರು ಇದ್ದಾರೆ. ನಾನು ಪೂಜಾ ಮನೆಗೆ ಹೋದಾಗ, ಅಲ್ಲಿ ಹಾಲು ಕೊಡಲು ತುಂಬಾ ಜನರು ಬಂದಿದ್ದರು ಅವರಿಗೆ ವಿಷಯ ಗೊತ್ತಾಗಿರುತ್ತದೆ. ಅವರು ಯಾರಾದಾರೂ ಆಲೂರು ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ಆಲೂರು ಪೊಲೀಸ್ ಠಾಣೆಯವರು ಬಂದು ನಮ್ಮನ್ನು ಆ ರಾತ್ರಿ ವಿಚಾರಣೆ ಮಾಡಿಲ್ಲ. ನನ್ನ ತಂದೆಯವರು ಆಲೂರು ಪೊಲೀಸ್ ಠಾಣೆಗೆ ಆ ದಿನ

ಹೋಗಿ ದೂರು ಕೊಡಲು ಊರಿನವರ ಜೊತೆ ಹೋಗಿದ್ದಾರಾ ಎಂದು ಗೊತ್ತಿಲ್ಲ.

ಕೃತ್ಯ ನಡೆದ ಸ್ಥಳ ಅಶೋಕ ಎನ್ನುವವರಿಗೆ ಸೇರಿರುತ್ತದೆ. ಆರೋಪಿಯನ್ನು ನಮ್ಮ ಊರಿನವರು ಹಿಡಿಯಲು ಪ್ರಯತ್ನ ಪಟ್ಟರಾ ಎಂದರೆ ಸಾಕ್ಷಿ ಆರೋಪಿ ತಪ್ಪಿಸಿಕೊಂಡು ಓಡಿ ಹೋಗಿದ್ದ ಎಂದು ಹೇಳುತ್ತಾರೆ. ಆರೋಪಿಯನ್ನು ಎಷ್ಟು ವರ್ಷದಿಂದ ನೋಡಿದ್ದೀರಾ ಎಂದರೆ ಸಾಕ್ಷಿ ಆರೋಪಿ ಪಕ್ಕದ ಭಕ್ತರವಳ್ಳಿಯವನು ಆಗಾಗಿ ನನಗೆ ಅವನು ಗೊತ್ತಿರುತ್ತಾನೆ.

ಊರಿನವರು ಆರೋಪಿಯ ಮನೆಗೆ ವಿಚಾರಣೆ ಮಾಡಿದ್ದಾರಾ ಎಂಬುದು ನನಗೆ ಗೊತ್ತಿಲ್ಲ. ನಾನು ನನ್ನ ಅಕ್ಕನಿಗೆ ಘಟನೆಯ ವಿಚಾರವನ್ನು ಸಂಜೆ ಹೇಳಿರುತ್ತೇನೆ. ಆಕೆ ಸಂಜೆ ತಡವಾಗಿ ಬರುತ್ತಿದ್ದಳು. ನಾನು ನನ್ನ ಅಕ್ಕನಿಗೆ ವಿಷಯ ತಿಳಿಸಿದಾಗ ಸಂಜೆ 7.30-8.00 ಗಂಟೆ ಆಗಿರುತ್ತದೆ. ನಮ್ಮ ಊರಿನಿಂದ ಭಕ್ತರವಳ್ಳಿ ಹಳ್ಳಿಗೆ ಬೀದಿ ದೀಪಗಳು ಇರುವುದಿಲ್ಲ. ಆರೋಪಿಯ ಜೊತೆ ನನ್ನ ತಂದೆ ಹಣಕಾಸಿನ ವ್ಯವಹಾರ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ವ್ಯವಸಾಯಕ್ಕೋಸ್ಕರ ಆರೋಪಿಯಿಂದ ಸಾಲ ಪಡೆದಿದ್ದರೂ ಎಂದರೆ ಸರಿಯಲ್ಲ.

ನಾವು ವ್ಯವಸಾಯದಿಂದ ನಮ್ಮ ಜೀವನವನ್ನು ನಡೆಸುತ್ತಿದ್ದೇವು, ನಮ್ಮ ತಂದೆ ಸಾಲ ಮಾಡುತ್ತಿರಲಿಲ್ಲ. ನನ್ನ ತಂದೆ ಹಣಕಾಸಿನ ವ್ಯವಹಾರಗಳು ಗೊತ್ತು. ನನ್ನ ತಂದೆ ಆರೋಪಿಯ ಹತ್ತಿರ ಸಾಲ ಪಡೆದಿದ್ದು, ಆರೋಪಿ ಪದೇ ಪದೇ ನನ್ನ ತಂದೆಯ ಹತ್ತಿರ ಸಾಲ ಕೊಡಲು ಕೇಳುತ್ತಿದ್ದರು ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ಜನರು ಓಡಾಡುವ ಜಾಗ ಸರಿ. ಅಲ್ಲಿ ಕಾಲುದಾರಿಯಾಗಿರುವುದರಿಂದ ಮುಖ್ಯ ರಸ್ತೆಗಿಂತ ಕಡಿವೆ ಜನ ಓಡಾಡುತ್ತಾರೆ.

ಆ ದಿನ ಜೋಳದ ತೆನೆ ಕೀಳಲು ಹೋಗಿದ್ದು ಆ ಜಮೀನಿನ ಮಾಲೀಕರು ಕೂಗಿಕೊಂಡಿದ್ದರಿಂದ ನಾನು ಓಡಲು ಹೋಗಿ ಪೊದೆ ಮೇಲೆ ಬಿದ್ದು ಗಾಯ

ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಮೇಗೌಡರು ಸುಮಾರು 50 ಅಡಿ ದೂರದಲ್ಲಿರಬಹುದು ನನ್ನ ದ್ವನಿ ಅವರಿಗೆ ಕೇಳಿಸುವಷ್ಟರಲ್ಲಿ ಇದ್ದರು. ರಾಮೇಗೌಡರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು ಎಂದರೆ ಅವರ ವಯಸ್ಸು ನನಗೆ ಗೊತ್ತಿಲ್ಲ.

ಆರೋಪಿಯು ಆ ದಿನ ನಾನು ಹೇಳಿದಾಗೆ ಯಾವುದೇ ರೀತಿ ನನ್ನನ್ನು ಎಳೆದಾಡಿಲ್ಲ ಹಾಗೂ ಬಾಯಿ ಮುಚ್ಚಿಲ್ಲ ಎಂದರೆ ಸರಿಯಲ್ಲ. ನನ್ನ ಸ್ವೆಟರ್ ಅಲ್ಲಿ ಬಿದ್ದಿತ್ತು ಎಂದು ನಾನು ಸುಳ್ಳು ಸಾಕ್ಷಿ  ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಅಲ್ಲಿ ಚಪ್ಪಲಿ ಹಾಗೂ ಬೈಕನ್ನು ಬಿಟ್ಟು ಹೋಗಿದ್ದ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ನನ್ನ ಗೆಳತಿಯಾಗಿದ್ದರಿಂದ ನಾವಿಬ್ಬರು ಸೇರಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಐಡಿ ಕಾರ್ಡ್ ಹಾಗೂ ಬಸ್ ಪಾಸನ್ನು ಪಡೆದಿರುವುದಿಲ್ಲ. ಆರೋಪಿಯು ಆ ದಿನ ನನ್ನನ್ನು ಮಾನಭಂಗ ಮಾಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ನನ್ನ ತಂದೆಗೂ ಹಣ ಕಾಸಿನ ವ್ಯವಹಾರದಲ್ಲಿ ವ್ಯತ್ಯಾಸವಾಗಿದ್ದರಿಂದ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ನಾನು ಕಲಂ 164 ರಡಿಯಲ್ಲಿ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಹಜರಿಗೆ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಕೇಸಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಕೂಡ ಪೊಲೀಸರು ಹೇಳಿ

ಕೊಟ್ಟಾಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ